KAMS610006652024

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ., ಪಿರಿಯಾಪಟ್ಟಣ.**

**-: ಉಪಸ್ಥಿತರು :-**

ಶ್ರೀ ಯೋಗೇಶ ಎಂ.ಆರ್., ಬಿ.ಎ.ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.

ದಿನಾಂಕ 02 ನೇ ಏಪ್ರಿಲ್ 2026.

**ಕ್ರಿಮಿನಲ್ ಪ್ರಕರಣ ಸಂಖ್ಯೆ: 154/2024**

ಪಿರ್ಯಾದಿದಾರರು : ರಾಜ್ಯದ ಪರ ಪಿರಿಯಾಪಟ್ಟಣ ಠಾಣಾ ಆರಕ್ಷಕರು
(ಸಹಾಯಕ ಸರ್ಕಾರಿ ಅಭಿಯೋಜಕರವರಿಂದ)

**ವಿರುದ್ಧ**

ಆರೋಪಿ : ಕೃಷ್ಣೇಗೌಡ ಕೆ.ಟಿ,
ವಯಸ್ಸು 62 ವರ್ಷ,
ಬಿನ್ ಲೇ.ತಿಮ್ಮೇಗೌಡ,
ವಾಸಃ ಕಗ್ಗುಂಡಿ ಗ್ರಾಮ,
ಪಿರಿಯಾಪಟ್ಟಣ ತಾಲ್ಲೂಕು,
ಮೈಸೂರು ಜಿಲ್ಲೆ.

*( ಆರೋಪಿ ಪರವಾಗಿ ಶ್ರೀ **ಕೆ.ಬಿ.ಎಸ್.,** ವಕೀಲರು )*

| | | | |
|---|---|---|---|
| **1.** | ಕೃತ್ಯ ನಡೆದ ದಿನಾಂಕ | : | 11.10.2023 |
| **2.** | ಕೃತ್ಯ ವರದಿ ಮಾಡಿದ ದಿನಾಂಕ | : | 14.10.2023 |
| **3.** | ದೂರುದಾರರ ಹೆಸರು | : | ಸ್ವಾಮಿ |
| **4.** | ಸಾಕ್ಷಿದಾರರ ಹೇಳಿಕೆಯ ದಿನಾಂಕ | : | 03.12.2025 |
| **5.** | ಸಾಕ್ಷಿದಾರರ ಹೇಳಿಕೆಯು ಮುಕ್ತಾಯವಾದ ದಿನಾಂಕ | : | 18.02.2026 |
| **6.** | ಆಪಾದಿಸಲಾದ ಕಲಂಗಳು | : | ಭಾರತ ದಂಡ ಸಂಹಿತೆ ಕಲಂ.279 ಮತ್ತು 304(ಎ) ಹಾಗೂ ಮೋಟಾರು ವಾಹನಗಳ ಅಧಿನಿಯಮ ಕಲಂ.187. |
| **7.** | ನ್ಯಾಯಾಲಯದ ತೀರ್ಮಾನ | : | ನಿರ್ದೋಷಿ. |

Digitally signed by
YOGESH M R
Location: PRL.CIVIL
JUDGE AND JMFC.,
PERIYAPATNA.

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.

**-: ತೀರ್ಪು :-**

ಆರೋಪಿ ವಿರುದ್ಧ ಪಿರಿಯಾಪಟ್ಟಣ ಪೊಲೀಸ್ ಠಾಣಾ ಆರಕ್ಷಕ ನಿರೀಕ್ಷಕರು, ಭಾರತ ದಂಡ ಸಂಹಿತೆ ಕಲಂ.279 ಮತ್ತು 304(ಎ) ಹಾಗೂ ಮೋಟಾರು ವಾಹನಗಳ ಅಧಿನಿಯಮ ಕಲಂ.187 ರಡಿಯಲ್ಲಿ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾರೆ.

2. <u>ಮಾನ್ಯ ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿರುತ್ತಿದೆ :-</u>

ದಿನಾಂಕ 11.10.2023 ರಂದು ಸಂಜೆ 6.30 ಗಂಟೆ ಸಮಯದಲ್ಲಿ, ಪಿರಿಯಾಪಟ್ಟಣ ತಾಲ್ಲೂಕು ಹರವೆ ಮಲ್ಲರಾಜಪಟ್ಟಣ ಗ್ರಾಮದ ಡಿ.ಆರ್ ಶೆಟ್ಟಿ ಸನ್ಸ್ ಸ್ವರ್ಣ ಭೂಮಿ ಪೋರ್ಟ್ ಲೇಜೌಟ್ ಮುಂದೆ ಹಾದು ಹೋಗಿರುವ ಬೆಟ್ಟದಪುರದ – ಪಿರಿಯಾಪಟ್ಟಣ ಮುಖ್ಯ ರಸ್ತೆಯ ಪೂರ್ವ ಭಾಗದ ಪುಟ್ ಪಾತ್ ನಲ್ಲಿ, ಮೃತ ಕಾಳಯ್ಯ ರವರು ತಮ್ಮ ಜಮೀನಿನಿಂದ ಮನೆಯ ಕಡೆಗೆ ನಡೆದುಕೊಂಡು ಹೋಗುವಾಗ, ಆರೋಪಿಯು ಚಾಸಾ.12 ರವರ ಬಾಬ್ತು ಕೆ.ಎ-09-ಹೆಚ್.ಜಿ-3654 ಹೊಂಡಾ ಶೈನ್ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು, ಮೃತ ಕಾಳಯ್ಯ ರವರಿಗೆ ಹಿಂದಿನಿಂದ ಡಿಕ್ಕಿಪಡಿಸಿ ಅಪಘಾತವನ್ನುಂಟು ಮಾಡಿದ ಪರಿಣಾಮ, ಕಾಳಯ್ಯ ರವರ ತಲೆಗೆ, ಬಾಯಿಗೆ, ಎಡ ಭುಜಕ್ಕೆ ಮತ್ತು ಮೈಕೈಗೆ ಗಾಯಗಳಾಗಿ ಪ್ರಜ್ಞೆ ತಪ್ಪಿದ್ದು, ಕಾಳಯ್ಯ ರವರನ್ನು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ನಂತರ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಸೇರಿಸಿ, ಅನಂತರ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಅಲ್ಲಿನಿಂದ ಮತ್ತೆ ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲಿಸಿದ್ದು, ದಿನಾಂಕ 17.10.2023 ರಂದು ಸಂಜೆ 6.28 ಗಂಟೆ ಸಮಯದಲ್ಲಿ, ಚಿಕಿತ್ಸೆ ಫಲಕಾರಿಯಾಗದೇ ಕಾಳಯ್ಯ ರವರು ಮೃತಪಟ್ಟಿರುತ್ತಾರೆ. ಆರೋಪಿಯು ಅಪಘಾತದ ನಂತರ ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸದೇ ಮತ್ತು ಅಪಘಾತದ

ಮಾಹಿತಿಯನ್ನು ಪೊಲೀಸರಿಗೆ ತಿಳಿಸದೇ ಪರಾರಿಯಾಗಿರುತ್ತಾರೆಂದು ವಿರುದ್ಧ ಪಿರಿಯಾಪಟ್ಟಣ ಠಾಣಾ ಆರಕ್ಷಕರು ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾರೆ.

**3.** ಪಿರಿಯಾಪಟ್ಟಣ ಠಾಣಾ ಆರಕ್ಷಕರು, ಚಾಸಾ.15 ಗಣೇಶ., ಇವರು ಠಾಣಾ ಉಸ್ತುವಾರಿಯಲ್ಲಿದ್ದಾಗ, ಚಾಸಾ.1 ಸ್ವಾಮಿ ರವರು ನೀಡಿದ ದೂರನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆ:230/2023 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತಾರೆ. ನಂತರ ಚಾಸಾ.20 ರಾಘವೇಂದ್ರ ಜಿ.ಕೆ., ರವರು ಸಾಕ್ಷಿದಾರರ ಹೇಳಿಕೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪಡೆದು ತನಿಖೆಯನ್ನು ಪೂರ್ಣಗೊಳಿಸಿ, ನ್ಯಾಯಾಲಯಕ್ಕೆ ಆರೋಪಿ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

**4.** ತನಿಖಾಧಿಕಾರಿಯು ಅಂತಿಮ ವರದಿಯನ್ನು ಸಲ್ಲಿಸಿದ ನಂತರ, ನ್ಯಾಯಾಲಯವು ಪ್ರಕರಣದಲ್ಲಿ ಆರೋಪಿ ವಿರುದ್ಧ ಮೇಲ್ಕಂಡ ಕಲಂಗಳ ಅಡಿಗಳಲ್ಲಿ ಸಂಜ್ಞಾನವನ್ನು ತೆಗೆದುಕೊಂಡಿರುತ್ತದೆ.

**5.** ಆರೋಪಿ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ.207ರ ಅನ್ವಯ, ಅವರಿಗೆ ಅಂತಿಮ ವರದಿಯ ಪ್ರತಿಯನ್ನು ನೀಡಲಾಗಿದೆ. ಆರೋಪಣೆಯನ್ನು ರಚಿಸುವ ಪೂರ್ವದಲ್ಲಿ ವಾದವನ್ನು ಆಲಿಸಿ, ನಂತರ ಭಾರತ ದಂಡ ಸಂಹಿತೆ ಕಲಂ.279 ಮತ್ತು 304(ಎ) ಹಾಗೂ ಮೋಟಾರು ವಾಹನಗಳ ಅಧಿನಿಯಮ

ಕಲಂ.187 ರಡಿಗಳಲ್ಲಿ ಶಿಕ್ಷಿಸಬಹುದಾದ ಆರೋಪಣೆಯನ್ನು ರಚಿಸಿ, ಆರೋಪಿಗೆ ಓದಿ ಹೇಳಲಾಯಿತು. ಆರೋಪಿ ತಪ್ಪನ್ನು ಒಪ್ಪಿಕೊಳ್ಳದೇ ವಿಚಾರಣೆಯಾಗಬೇಕೆಂದು ಕೇಳಿಕೊಂಡಿರುತ್ತಾರೆ.

**6.** ಆರೋಪಿ ವಿರುದ್ಧ ಮಾಡಿರುವ ಆರೋಪಗಳನ್ನು ಸಾಭೀತುಪಡಿಸುವ ಉದ್ದೇಶದಿಂದ, ಮಾನ್ಯ ಅಭಿಯೋಜನೆಯು ತಮ್ಮ ಪರವಾಗಿ ಅಂತಿಮ ವರದಿಯಲ್ಲಿ ನಮೂದಿಸಿರುವ 20 ಸಾಕ್ಷಿಗಳ ಪೈಕಿ 5 ಸಾಕ್ಷಿಗಳನ್ನು ಪ್ರಾಸಾ.1 ರಿಂದ 5 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿ, ದಾಖಲೆಗಳನ್ನು ಮತ್ತು ಸಹಿಗಳನ್ನು ನಿಪಿ.1 ರಿಂದ 14 ರಂತೆ ಗುರುತಿಸಿಕೊಂಡು, ತಮ್ಮ ಪರ ಸಾಕ್ಷಿಗಳ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತದೆ. ಮಾನ್ಯ ಅಭಿಯೋಜನೆಯ ಸಾಕ್ಷ್ಯದಲ್ಲಿ, ಆರೋಪಿಗೆ ವ್ಯತಿರಿಕ್ತವಾದ ಯಾವುದೇ ಸಂದರ್ಭಗಳು ಕಂಡುಬಾರದ ಕಾರಣ, ಆರೋಪಿಯನ್ನು ದಂ.ಪ್ರ.ಸಂ.ಕಲಂ.313 ರಡಿ ವಿಚಾರಣೆ ಮಾಡುವುದರಿಂದ ವಿನಾಯಿತಿ ನೀಡಲಾಗಿದೆ.

**7.** ಉಭಯ ಪಕ್ಷಗಾರರ ವಕೀಲರುಗಳ ವಾದ-ವಿವಾದಗಳನ್ನು ಆಲಿಸಿ ಮತ್ತು ಸಾಕ್ಷ್ಯಾಧಾರಗಳನ್ನು ಗಮನದಲ್ಲಿರಿಸಿಕೊಂಡು ಅವಲೋಕಿಸಿದಾಗ, ಈ ಪ್ರಕರಣದಲ್ಲಿ ನ್ಯಾಯಾಲಯದ ಪರಿಗಣನೆಗೆ ಉದ್ಭವಿಸುವ ಅಂಶಗಳು ಈ ಕೆಳಕಂಡಂತಿವೆ.

## ಅಂಶಗಳು

**1.** ದಿನಾಂಕ 11.10.2023 ರಂದು ಸಂಜೆ 6.30 ಗಂಟೆ ಸಮಯದಲ್ಲಿ, ಪಿರಿಯಾಪಟ್ಟಣ ತಾಲ್ಲೂಕು ಹರವೆ ಮಲ್ಲರಾಜಪಟ್ಟಣ ಗ್ರಾಮದ ಡಿ.ಆರ್ ಶೆಟ್ಟಿ ಸನ್ಸ್ ಸ್ವರ್ಣ ಭೂಮಿ ಫೋರ್ಸ್ಟ ಲೇಜೌಟ್ ಮುಂದೆ ಹಾದು ಹೋಗಿರುವ ಬೆಟ್ಟದಪುರದ – ಪಿರಿಯಾಪಟ್ಟಣ ಮುಖ್ಯ ರಸ್ತೆಯ ಪೂರ್ವ ಭಾಗದ ಫುಟ್ ಪಾತ್ ನಲ್ಲಿ, ಮೃತ ಕಾಳಯ್ಯ ರವರು ತಮ್ಮ ಜಮೀನಿನಿಂದ ಮನೆಯ ಕಡೆಗೆ ನಡೆದುಕೊಂಡು ಹೋಗುವಾಗ, ಆರೋಪಿಯು ಚಾಸಾ.12 ರವರ ಬಾಬ್ತು ಕೆ.ಎ-09-ಹೆಚ್.ಜಿ-3654 ಹೊಂಡಾ ಶೈನ್ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು, ಮೃತ ಕಾಳಯ್ಯ ರವರಿಗೆ ಹಿಂದಿನಿಂದ ಡಿಕ್ಕಿಪಡಿಸಿ ಅಪಘಾತವನ್ನುಂಟು ಮಾಡಿ, ಆ ಮೂಲಕ ಆರೋಪಿಯು ಭಾ.ದಂ.ಸಂ.ಕಲಂ.279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯು ಸದರಿ ಅಪಘಾತವನ್ನುಂಟು ಮಾಡಿದ ಪರಿಣಾಮ, ಕಾಳಯ್ಯ ರವರ ತಲೆಗೆ, ಬಾಯಿಗೆ, ಎಡ ಭುಜಕ್ಕೆ ಮತ್ತು ಮೈಕೈಗೆ ಗಾಯಗಳಾಗಿ ಪ್ರಜ್ಞೆ ತಪ್ಪಿದ್ದು, ಕಾಳಯ್ಯ ರವರನ್ನು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ನಂತರ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಸೇರಿಸಿ, ಅನಂತರ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಅಲ್ಲಿನಿಂದ ಮತ್ತೆ ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲಿಸಿದ್ದು, ದಿನಾಂಕ 17.10.2023 ರಂದು ಸಂಜೆ 6.28 ಗಂಟೆ ಸಮಯದಲ್ಲಿ, ಚಿಕಿತ್ಸೆ ಫಲಕಾರಿಯಾಗದೇ ಕಾಳಯ್ಯ ರವರು ಮೃತಪಟ್ಟಿರುತ್ತಾರೆ, ಆ ಮೂಲಕ ಆರೋಪಿಯು ಭಾ.ದಂ.ಸಂ.ಕಲಂ.304(ಎ)ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**3.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯು ಅಪಘಾತದ ನಂತರ ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸದೇ ಮತ್ತು ಅಪಘಾತದ ಮಾಹಿತಿಯನ್ನು ಪೊಲೀಸರಿಗೆ ತಿಳಿಸದೇ ಪರಾರಿಯಾಗಿದ್ದು, ಆ ಮೂಲಕ ಆರೋಪಿಯು ಮೋಟಾರು ವಾಹನಗಳ ಅಧಿನಿಯಮ ಕಲಂ.187 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**4.** ಯಾವ ಆದೇಶ ?

8. ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಗಳು

ಅಂಶ-1 ರಿಂದ 3 : **"ನಕಾರಾತ್ಮಕವಾಗಿ"**

ಅಂಶ-4 : ಅಂತಿಮ ಆದೇಶದಂತೆ

ಈ ಕೆಳಕಂಡ,

**-: ಕಾ ರ ಣ ಗ ಳು :-**

**ಅಂಶ-1 ರಿಂದ 3 :-**

9. ಈ ಎಲ್ಲ ಅಂಶಗಳು ಒಂದಕ್ಕೊಂದು ಪೂರಕವಾಗಿರುವ ಕಾರಣ, ಸಾಕ್ಷ್ಯದ ವಿಮರ್ಶೆಯ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಚರ್ಚಿಸಲು ಒಟ್ಟಿಗೆ ತೆಗೆದುಕೊಳ್ಳಲಾಗಿದೆ.

10. ಮಾನ್ಯ ಅಭಿಯೋಜನೆಯು ತಮ್ಮ ಆರೋಪಣೆಯನ್ನು ಸಾಭೀತುಪಡಿಸಲು, ಈ ಪ್ರಕರಣದ ದೂರುದಾರರಾದ ಚಾಸಾ.1 ಸ್ವಾಮಿ ರವರನ್ನು ಪ್ರಾಸಾ.3 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ತನಗೆ ಆರೋಪಿಯ

ಪರಿಚಯವಿಲ್ಲ. ಮೃತ ಕಾಳಯ್ಯ ರವರು ತನ್ನ ತಂದೆ. ದಿನಾಂಕ 11.10.2023 ರಂದು ಸಂಜೆ 7-00 ಗಂಟೆ ಸಮಯದಲ್ಲಿ ತಾನು ಮನೆಯಲ್ಲಿ ಇದ್ದಾಗ ಯಾರೋ ತನಗೆ ಪೋನ್ ಮಾಡಿ ತನ್ನ ತಂದೆಗೆ ಹರವೆ ಮಲ್ಲರಾಜ ಪಟ್ಟಣದ ಲೇಔಟ್ ಬಳಿ ಬೆಟ್ಟದಪುರ – ಪಿರಿಯಾಪಟ್ಟಣ ರಸ್ತೆಯಲ್ಲಿ ಅಪಘಾತವಾಗಿರುವುದಾಗಿ ತಿಳಿಸಿರುತ್ತಾರೆ. ತಾನು ಕೂಡಲೇ ಸ್ಥಳಕ್ಕೆ ಹೋಗಿ ನೋಡಲಾಗಿ ತನ್ನ ತಂದೆಯ ತಲೆಗೆ, ಬಾಯಿಗೆ ಎಡ ಭುಜಕ್ಕೆ ಹಾಗೂ ಮೈಕೈಗೆ ಗಾಯಗಳಾಗಿದ್ದವು. ಕೂಡಲೇ ಅವರನ್ನು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್ ಆಸ್ಪತ್ರೆಗೆ ನಂತರ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇವೆ.

ಮುಂದುವರೆದು, ದಿನಾಂಕ 17.10.2023 ರಂದು ತನ್ನ ತಂದೆ ಮೈಸೂರಿನ ಕೆ.ಆರ್ ಆಸ್ಪತ್ರೆಯಲ್ಲಿ ಮೃತರಾಗಿರುತ್ತಾರೆ. ಸದರಿ ವಿಚಾರವನ್ನು ತಾನು ಪೊಲೀಸರಿಗೆ ತಿಳಿಸಿರುತ್ತೇನೆ. ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂದು ತನಗೆ ಗೊತ್ತಿಲ್ಲ. ದೂರನ್ನು ನಿಪಿ.2 ಎಂದು, ತಮ್ಮ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಗಿದೆ. ನಿಪಿ.2 ಕ್ಕೆ ತಾನು ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ನಿಪಿ.2 ರಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿರುವುದಿಲ್ಲ. ತಾನು ಪೊಲೀಸರ ಮುಂದೆ ಯಾವುದೇ ಮರು ಹೇಳಿಕೆ ನೀಡಿಲ್ಲವೆಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.3 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲು ಮಾಡಿದರು ಸಹಿತ, ತಮ್ಮ ವಾದವನ್ನು ಪುಷ್ಠೀಕರಿಸುವಂತಹ ಹೇಳಿಕೆಗಳನ್ನು ಪಡೆಯಲು ವಿಫಲರಾಗಿರುತ್ತಾರೆ.

**11.** ಇನ್ನೂ ಪ್ರತ್ಯಕ್ಷ ಸಾಕ್ಷಿಯಾದ ಚಾಸಾ.2 ತ್ರಿಶಾಂಕ್ ರವರನ್ನು ಪ್ರಾಸಾ.4 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ಮೃತ ಕಾಳಯ್ಯ ತನ್ನ ಅಜ್ಜ. ಚಾಸಾ.3 ತನ್ನ ಅಣ್ಣ. ತನಗೆ ಈ ಪ್ರಕರಣದ ವಿಚಾರ ಗೊತ್ತಿಲ್ಲ, ತಾನು ಯಾವುದೇ ಅಪಘಾತವನ್ನು ನೋಡಿಲ್ಲ, ನ್ಯಾಯಾಲಯದ ಮುಂದಿರುವ ಆರೋಪಿಯನ್ನು ತಾನು ಈ ಹಿಂದೆ ನೋಡಿಲ್ಲ. ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲವೆಂದು ಪ್ರತಿಕೂಲ ಸಾಕ್ಷವನ್ನು ನುಡಿದಿರುತ್ತಾರೆ.

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.4 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲು ಮಾಡಿದರು ಸಹಿತ, ತಮ್ಮ ವಾದವನ್ನು ಪುಷ್ಠೀಕರಿಸುವಂತಹ ಹೇಳಿಕೆಗಳನ್ನು ಪಡೆಯಲು ವಿಫಲರಾಗಿರುತ್ತಾರೆ.

**12.** ಇನ್ನೋರ್ವ ಪ್ರತ್ಯಕ್ಷ ಸಾಕ್ಷಿಯಾದ ಚಾಸಾ.3 ಮಹೇಶ್ ಕುಮಾರ್ ರವರನ್ನು ಪ್ರಾಸಾ.5 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ತನಗೆ ಈ ಪ್ರಕರಣದ ವಿಚಾರ ಗೊತ್ತಿಲ್ಲ, ತಾನು ಯಾವುದೇ ಅಪಘಾತವನ್ನು ನೋಡಿಲ್ಲ,

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ತಾನು ಈ ಹಿಂದೆ ನೋಡಿಲ್ಲ. ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಸ್ಥಳ ಮಹಜರನ್ನು ನಿಪಿ.5 ಎಂದು, ನಕಾಶೆಯನ್ನು ನಿಪಿ.6 ಎಂದು, ತಮ್ಮ ಸಹಿಯನ್ನು ನಿಪಿ.5(ಎ) ಮತ್ತು 6(ಎ) ಎಂದು ಗುರುತಿಸಲಾಗಿದೆ. ನಿಪಿ.5 ಮತ್ತು 6 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ, ತನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಹಾಗೂ ಯಾವುದೇ ಕಚ್ಚಾ ನಕಾಶೆಯನ್ನು ತಯಾರಿಸಿಲ್ಲವೆಂದು ಪ್ರತಿಕೂಲ ಸಾಕ್ಷವನ್ನು ನುಡಿದಿರುತ್ತಾರೆ.

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.5 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲು ಮಾಡಿದರು ಸಹಿತ, ತಮ್ಮ ವಾದವನ್ನು ಪುಷ್ಠೀಕರಿಸುವಂತಹ ಹೇಳಿಕೆಗಳನ್ನು ಪಡೆಯಲು ವಿಫಲರಾಗಿರುತ್ತಾರೆ.

**13.** ಇನ್ನೂ ಮಹಜರ್ ಸಾಕ್ಷಿಗಳಾದ ಚಾಸಾ.6 ಕೆ.ವಿ.ಶಿವರಾಜು ರವರನ್ನು ಪ್ರಾಸಾ.1 ರಂತೆ ಹಾಗೂ ಚಾಸಾ.7 ಕೆ.ಎಸ್.ಶಿವರಾಜು ರವರನ್ನು ಪ್ರಾಸಾ.2 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಗಳು ತಮ್ಮ ಮುಖ್ಯ ವಿಚಾರಣೆಯಲ್ಲಿ, ಮಹಜರನ್ನು ನಿಪಿ.1 ಎಂದು, ತಮ್ಮ ಸಹಿಗಳನ್ನು ನಿಪಿ.1(ಎ) ಮತ್ತು ನಿಪಿ.1(ಬಿ) ಎಂದು ಗುರುತಿಸಲಾಗಿದೆ. ನಿಪಿ.1 ಕ್ಕೆ ಈಗ್ಗೆ 1-2 ವರ್ಷದ ಹಿಂದೆ ಪೊಲೀಸ್ ಠಾಣೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇವೆ. ಪೊಲೀಸರು ತಮ್ಮ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಹಾಗೂ ಯಾವುದೇ ವಾಹನವನ್ನು ಅಮಾನತ್ತುಪಡಿಕೊಂಡಿರುವುದಿಲ್ಲ. ನಿಪಿ.1 ರಲ್ಲಿ ಏನು ಬರೆದಿದೆ ಎಂದು

ಗೊತ್ತಿಲ್ಲವೆಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.1 ಮತ್ತು 2 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲು ಮಾಡಿದರು ಸಹಿತ, ತಮ್ಮ ವಾದವನ್ನು ಪುಷ್ಟೀಕರಿಸುವಂತಹ ಹೇಳಿಕೆಗಳನ್ನು ಪಡೆಯಲು ವಿಫಲರಾಗಿರುತ್ತಾರೆ.

**14.** ಪ್ರಮುಖ ಸಾಕ್ಷಿದಾರರಾದ ಪ್ರಾಸಾ.1 ರಿಂದ 5 ರವರೇ ಮಾನ್ಯ ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸದಿದ್ದ ಕಾರಣ, ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನ ಆಗದೇ ಇರುವುದರಿಂದ, ಉಳಿದ ಎಲ್ಲ ಸಾಕ್ಷಿಗಳನ್ನು ಕೈ ಬಿಡಲಾಯಿತು. ಹೀಗಾಗಿ, ಆರೋಪಿ ವಿರುದ್ಧವಾಗಿ ಹೊರಿಸಿದ ಆರೋಪಗಳಿಗೆ ಯಾವುದೇ ಸಾಕ್ಷ್ಯವಿಲ್ಲದಿದ್ದರಿಂದ, ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿಯಲ್ಲಿನ ಆರೋಪಿಯ ಹೇಳಿಕೆಯನ್ನು ಸಹ ಕೈ ಬಿಡಲಾಯಿತು.

**15.** ಇನ್ನೂ ನಿಪಿ.10 ರ ಮರಣೋತ್ತರ ವರದಿಯ ಅನ್ವಯ ಕಾಳಯ್ಯ ಎಂಬುವವರು ಮೃತಪಟ್ಟಿರುವುದು ಕಂಡು ಬಂದಿರುತ್ತದೆ. ಈಗಾಗಲೇ ಮೇಲೆ ವಿವರಿಸಿದಂತೆ, ಅಪಘಾತದಿಂದ ಕಾಳಯ್ಯ ಎಂಬುವವರು ಮೃತಪಟ್ಟಿರುವ ಅಂಶ ರುಜುವಾತು ಆಗಿದ್ದರು ಕೂಡ, ಆರೋಪಿಯು ಅತೀವೇಗವಾಗಿ ಮತ್ತು ಅಜಾಗರೂಕತೆಯಿಂದ ವಾಹನವನ್ನು ಚಾಲನೇ ಮಾಡಿದ ಪರಿಣಾಮ ಸದರಿ ಅಪಘಾತವಾಗಿರುತ್ತದೆ

ಎಂದು ಮಾನ್ಯ ಅಭಿಯೋಜನೆಯು ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುತ್ತದೆ.

**16.** ಇನ್ನೂ ದೂರುದಾರರಾದ ಪ್ರಾಸಾ.3 ರವರು ತಮ್ಮ ಸಾಕ್ಷ್ಯದಲ್ಲಿ, ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂದು ತನಗೆ ಗೊತ್ತಿಲ್ಲವೆಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇನ್ನೂ ಪ್ರಾಸಾ.3 ರವರು ತಮ್ಮ ಸಾಕ್ಷ್ಯದಲ್ಲಿ, ಈ ಪ್ರಕರಣದ ವಿಚಾರ ಗೊತ್ತಿಲ್ಲ, ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲವೆಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಪ್ರಾಸಾ.3 ಮತ್ತು 4 ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯು ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ವಾಹನವನ್ನು ಚಾಲನೇ ಮಾಡಿದ ಪರಿಣಾಮ ಅಪಘಾತ ಆಗಿರುತ್ತದೆ ಎಂದು ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಈ ನಿಟ್ಟಿನಲ್ಲಿ ಆರೋಪಿಯು ಕೆ.ಎ-09-ಹೆಚ್.ಜಿ-3654 ಹೊಂಡಾ ಶೈನ್ ಬೈಕನ್ನು ಅತಿವೇಗವಾಗಿ ಹಾಗೂ ಅಜಾಗರೂಕತೆಯಿಂದ ಚಾಲನೇ ಮಾಡಿ, ಕಾಳಯ್ಯ ರವರ ಸಾವಿಗೆ ಕಾರಣವಾಗಿರುತ್ತಾರೆಂದು ಹಾಗೂ ಅಪಘಾತದ ನಂತರ ಸ್ಥಳದಿಂದ ಪರಾರಿಯಾಗಿರುತ್ತಾರೆಂದು ರುಜುವಾತುಪಡಿಸುವ ನಿಟ್ಟಿನಲ್ಲಿ ಅಭಿಯೋಜನೆಯು ವಿಫಲವಾಗಿರುತ್ತಾರೆ.

**17.** ಆರೋಪಿಯ ಮೇಲೆ ಆಪಾದಿಸಿರುವ ಆರೋಪಣೆಯನ್ನು ರುಜುವಾತುಪಡಿಸಲು, ಮಾನ್ಯ ಅಭಿಯೋಜನೆಯು ಮೇಲೆ ವಿವರಿಸಿದ ಸಾಕ್ಷಿಗಳನ್ನು ಅವಲಂಬಿಸುತ್ತಾ ತಮ್ಮ ವಾದವನ್ನು ಮಂಡಿಸಿರುತ್ತಾರೆ. ಆದರೇ ಅವರ ವಾದವನ್ನು ಪುಷ್ಟೀಕರಿಸುವಂತಹ ಯಾವುದೇ ಪೂರಕವಾದ

ಸಾಕ್ಷ್ಯವು ಪ್ರಸ್ತುತ ಪ್ರಕರಣದಲ್ಲಿ ಕಂಡು ಬಂದಿರುವುದಿಲ್ಲ. ಈ ಎಲ್ಲ ಸಾಕ್ಷಿಗಳ ಸಾಕ್ಷ್ಯವನ್ನು ಗಣನೆಗೆ ತೆಗೆದುಕೊಂಡಾಗ, ಈ ಅಪಘಾತವು ಆರೋಪಿಯ ತಪ್ಪಿನಿಂದಲೇ ಆಗಿರುತ್ತದೆ ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ.

**18.** ಮೇಲ್ಕಂಡ ವಿವರಣೆಯ ಆಧಾರದಲ್ಲಿ, ನ್ಯಾಯಾಲಯದ ದೃಷ್ಟಿಯಲ್ಲಿ, ಮಾನ್ಯ ಅಭಿಯೋಜನೆಯು ಆರೋಪಿಯ ಮೇಲೆ ಹೊರಿಸಿದ ಆರೋಪಣೆಗಳನ್ನು ಸಾಬೀತುಪಡಿಸುವ ನಂಬಲು ಅರ್ಹವಾದ ಪೂರಕ ಸಾಕ್ಷ್ಯವನ್ನು ರುಜುವಾತುಪಡಿಸಲು ವಿಫಲವಾಗಿರುತ್ತದೆ. ಆದ್ದರಿಂದ, ಆರೋಪಿಯನ್ನು ಶಿಕ್ಷಿಸಲು ಯಾವುದೇ ಸಾಕ್ಷ್ಯವಿರುವುದಿಲ್ಲ ಮತ್ತು ಆರೋಪಿಯು ಖುಲಾಸೆಗೊಳ್ಳಲು ಅರ್ಹರಿರುತ್ತಾರೆಂದು ಅಭಿಪ್ರಾಯಪಟ್ಟು, ಮಾನ್ಯ ಅಭಿಯೋಜನೆಯು ತಮ್ಮ ವಾದವನ್ನು ಪುಷ್ಟೀಕರಿಸಲು ವಿಫಲವಾಗಿದೆ ಎಂಬ ಅಭಿಪ್ರಾಯದ ಮೇರೆಗೆ, ನ್ಯಾಯಾಲಯವು ಮೇಲಿನ 1 ರಿಂದ 3 ನೇ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

**<u>ಅಂಶ-4 :-</u>**

**19.** ಮೇಲಿನ ಅಂಶ-1 ರಿಂದ 3 ರಲ್ಲಿ ಚರ್ಚಿಸಿದ ಕಾರಣಗಳಿಂದ, ಈ ಕೆಳಕಂಡಂತೆ;

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ.255(1)ರಡಿ, ಆರೋಪಿಯನ್ನು ಭಾರತ ದಂಡ ಸಂಹಿತೆ ಕಲಂ.279 ಮತ್ತು 304(ಎ) ಹಾಗೂ ಮೋಟಾರು ವಾಹನಗಳ ಅಧಿನಿಯಮ ಕಲಂ.187 ರಡಿಯಲ್ಲಿ ಆರೋಪಿಸಲಾದ ಶಿಕ್ಷಾರ್ಹ ಅಪರಾಧಗಳು ಸಾಬೀತಾಗಿಲ್ಲವೆಂದು ಪರಿಗಣಿಸಿ, ಬಿಡುಗಡೆ ಮಾಡಲಾಗಿದೆ.

ಆರೋಪಿಯ ಬಂಧಪತ್ರಗಳು ಮತ್ತು ಅವರ ಜಾಮೀನುದಾರರ ಬಂಧಪತ್ರಗಳು ಮುಂದಿನ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ.

ಪಿ.ಎಫ್.ಸಂ.155/2023 ರಲ್ಲಿರುವ ಕೆ.ಎ-09-ಹೆಚ್.ಜಿ-3654 ಹೊಂಡಾ ಶೈನ್ ಬೈಕಿನ ಮೇಲೆ ಮಾಡಿದ ಮಧ್ಯಂತರ ಸುಪರ್ದಿ ಆದೇಶವನ್ನು ಮೇಲ್ಮನವಿ ಅವಧಿ ಮುಗಿದ ನಂತರ ಸ್ಥಿರೀಕರಿಸಲಾಗಿದೆ.

*(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ನೀಡಿ, ನಂತರ ಅದು ನನ್ನಿಂದ ಪರಿಷ್ಕರಿಸಲ್ಪಟ್ಟು, ಈ ದಿನಾಂಕ **02 ನೇ ಏಪ್ರಿಲ್ 2026** ಇಸವಿಯಂದು ತೆರೆದ ನ್ಯಾಯಾಲಯದಲ್ಲಿ ಓದಲಾಯಿತು)*

Digitally signed by YOGESH M R
Location: PRL.CIVIL JUDGE AND JMFC., PERIYAPATNA.

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.

-: ಅನುಬಂಧ :-

**ಅಭಿಯೋಜನೆಯವರ ಪರ ಮಾಡಿಸಲಾದ ಸಾಕ್ಷಿಗಳ ಪಟ್ಟಿ :**

| | | |
|---|---|---|
| ಪ್ರಾಸಾ.1 | - | ಕೆ.ವಿ.ಶಿವರಾಜು |
| ಪ್ರಾಸಾ.2 | - | ಕೆ.ಎಸ್.ಶಿವರಾಜು |
| ಪ್ರಾಸಾ.3 | - | ಸ್ವಾಮಿ |
| ಪ್ರಾಸಾ.4 | - | ತ್ರಿಶಾಂಕ್ |
| ಪ್ರಾಸಾ.5 | - | ಮಹೇಶ್ ಕುಮಾರ್ |

**ಅಭಿಯೋಜನೆಯವರ ಪರವಾಗಿ ಪ್ರದರ್ಶಿಕೆ ಮಾಡಲಾದ ದಾಖಲೆಗಳು :**

| | | |
|---|---|---|
| ನಿಪಿ.1 | - | ಅಮಾನತ್ತು ಮಹಜರ್ |
| ನಿಪಿ.1(ಎ) | - | ಪ್ರಾಸಾ.1 ರವರ ಸಹಿ |
| ನಿಪಿ.1(ಬಿ) | - | ಪ್ರಾಸಾ.2 ರವರ ಸಹಿ |
| ನಿಪಿ.2 | - | ದೂರು |
| ನಿಪಿ.2(ಎ) | - | ಪ್ರಾಸಾ.3 ರವರ ಸಹಿ |
| ನಿಪಿ.3 | - | ಪ್ರಾಸಾ.3 ರವರ ಮುಂದುವರೆದ ದೂರು |
| ನಿಪಿ.4 | - | ಪ್ರಾಸಾ.4 ರವರ ಹೇಳಿಕೆ |
| ನಿಪಿ.5 | - | ಸ್ಥಳ ಮಹಜರ್ |
| ನಿಪಿ.5(ಎ) | - | ಪ್ರಾಸಾ.5 ರವರ ಸಹಿ |
| ನಿಪಿ.6 | - | ಕಚ್ಚಾ ನಕಾಶೆ |
| ನಿಪಿ.6(ಎ) | - | ಪ್ರಾಸಾ.5 ರವರ ಸಹಿ |
| ನಿಪಿ.7 | - | ಪ್ರಾಸಾ.5 ರವರ ಹೇಳಿಕೆ |
| ನಿಪಿ.8 | - | ಪ್ರಾಸಾ.5 ರವರ ಮುಂದುವರೆದ ಹೇಳಿಕೆ |

| | | |
|---|---|---|
| ನಿಪಿ.9 | - | ಶವ ತನಿಖಾ ವರದಿ |
| ನಿಪಿ.10 | - | ಮರಣೋತ್ತರ ವರದಿ |
| ನಿಪಿ.11 | - | ಐ.ಎಂ.ವಿ ವರದಿ |
| ನಿಪಿ.12 | - | ಕಲಂ.133 ರ ರೀತ್ಯಾ ನೋಟೀಸ್ |
| ನಿಪಿ.13 | - | ಕಲಂ.133 ರ ನೋಟೀಸಿಗೆ ನೀಡಿದ ಉತ್ತರ |
| ನಿಪಿ.14 | - | ಇಂಡಿಮಿನಿಟಿ ಬಾಂಡ್ |

**ಅಭಿಯೋಜನೆಯವರ ಪರ ಗುರುತಿಸಲಾದ ಮುದ್ದೆಮಾಲುಗಳು :** **ಇಲ್ಲ**

**ಆರೋಪಿ ಪರ ವಿಚಾರಣೆಯಾದ ಸಾಕ್ಷಿದಾರರು :** **ಇಲ್ಲ**

**ಆರೋಪಿ ಪರ ಪ್ರದರ್ಶಿಕೆ ಮಾಡಲಾದ ದಾಖಲೆಗಳು :** **ಇಲ್ಲ**

Digitally signed by YOGESH M R
Location: PRL.CIVIL JUDGE AND JMFC., PERIYAPATNA.

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.